

ಕುದಿಬಿಂದುವೊಂದರಲ್ಲಿ ಸೇರಿ ಹದಗೊಂಡು ಕಟ್ಟಿರುವ ಕಥನ ಇದು.

ಚಿತ್ರದ ಕೊನೆಯೂ ಇಡೀ ಕಥನವನ್ನು ಮತ್ತೊಮ್ಮೆ ಬೆಳಗುವ ಹಾಗೆಯೇ ಇದೆ. ಕಾಣದ ತೀರದ ಸುಖದ ಹಂಬಲಿಕೆಯಲ್ಲಿ ಕಳೆದುಹೋಗಿದ್ದ ಲ್ಯಾನ್, ಸೈಕಲ್ ಡ್ರೈವರ್ ಹ್ವಾಯ್ ಮೂಲಕವೇ ಬದುಕಿನ ನಿಜಮುಖದ ಮೂಲದತ್ತ ಮುಖಮಾಡುತ್ತಾಳೆ. ಜೇಮ್ಸ್‌ಗೆ ಎಷ್ಟೋ ದಿನಗಳಿಂದ ಹುಡುಕುತ್ತಿರುವ ಮಗಳು ಸಿಕ್ಕುತ್ತಾಳೆ. ಅದು ಅವನನ್ನು ತನ್ನ ಅಸ್ತಿತ್ವದ ಮೂಲಭೂತ ಪ್ರಶ್ನೆಗಳನ್ನು ಕೇಳಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಬೀದಿಬದಿ ಸಂಚಾರಿ ವ್ಯಾಪಾರಿ ವುಡ್ಡಿಗೆ, ಕಳೆದುಹೋದ ಸೂಟ್‌ಕೇಸ್ ಸಿಕ್ಕುತ್ತದೆ. ಆದರೆ ಅವನು ಅದನ್ನು ಬಿಟ್ಟು ಮಳೆಯಲ್ಲಿ ನೆನೆದುಕೊಂಡು ರಸ್ತೆಯಲ್ಲಿ ಆಟವಾಡಲು ತೊಡಗುತ್ತಾನೆ. ಎಂದೂ ಇಲ್ಲದ ನಗುವನ್ನು ಆ ಮಳೆ, ಆ ಬೀದಿ, ಆ ರಾತ್ರಿ ಅವನ ಮುಖದ ಮೇಲೆ ಅರಳಿಸುತ್ತದೆ.

ಎಲ್ಲವೂ ಮುಗಿದುಹೋಯಿತು ಎಂಬ ವಿನಾಶದ ಅಂಚಿನಲ್ಲಿಯೇ ತನ್ನತನವನ್ನು ಕಂಡುಕೊಳ್ಳುವ ವಿವೇಕವೂ ಹುಟ್ಟುವುದು, ಆ ವಿವೇಕವೇ ನಮ್ಮ ಅಸ್ಮಿತೆಯ ಕುರಿತಾದ ಅರಿವನ್ನೂ ಮೂಡಿಸಿ ಮತ್ತೆ ಹೊಸತಾಗಿ ಚಿಗಿತುಕೊಳ್ಳಲು ಕಾರಣವಾಗಬಹುದು ಎಂಬ ಸಿನಿಮಾದೊಳಗಿನ ಆಶಯವೇ ನಮ್ಮೆದೆಯ ಒಳಗೂ ನಾಳಿನ ಕುರಿತಾಗಿ ನಂಬಿಕೆಯ ಹಣತೆಯನ್ನು ಬೆಳಗುವಂತಿದೆ.

☆